




ಡಾ. ಎಸ್. ರಾಮಮೂರ್ತಿ

# 28-9-2017ರಿಂದ 4-10-2017ರ ವರೆಗೆ



**ಮೇಷ**

ವಾರದ ಆರಂಭದಲ್ಲಿ ಭಯ. ಪೆಟ್ಟಾಗುವ ಸಂಭವ. ಕೋಪದ ಮಾತುಗಳು. ಉದ್ಯೋಗದಲ್ಲಿ ಅಶಾಂತಿ. ಲೇವಾದೇವಿಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಚೇತರಿಕೆ. ಏಕಾಗ್ರತೆಯಿಂದ ವೃತ್ತಿ ವ್ಯವಹಾರಗಳಲ್ಲಿ ತೊಡಗುವಿಕೆ. ಹಿರಿಯರಿಂದ ಸಲಹೆ. ಕುಟುಂಬದಲ್ಲಿ ಶಾಂತ ವಾತಾವರಣ, ಹಿತಸುದ್ದಿ. ಶುಭ ದಿನ: 30; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಅನುಕೂಲ. ನಿರೀಕ್ಷೆಯಂತೆ ಕಾರ್ಯ ಸಫಲತೆ. ವ್ಯಾಪಾರದಲ್ಲಿ ಲಾಭ. ಆತ್ಮೀಯರ ಭೇಟಿ. ಹಿತ ಸುದ್ದಿ. ಪ್ರಯಾಣ ಸೌಖ್ಯ. ವಾರದ ಮಧ್ಯಭಾಗದಲ್ಲಿ ಏನಾದರೊಂದು ಚಿಂತೆ. ಆರೋಗ್ಯ ವ್ಯತ್ಯಯ. ಅಕಾಲ ಭೋಜನ. ವಿರೋಧಿಗಳೊಂದಿಗೆ ವಾದ ವಿವಾದ. ವಾರಾಂತ್ಯ ಮನಃಶಾಂತಿ, ಪ್ರಗತಿ. ಶುಭ ದಿನ: 30; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮಿಥುನ**

ಉದ್ಯೋಗ ವೃತ್ತಿಗಳಲ್ಲಿ ಮನಃಶಾಂತಿ. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ. ಸರ್ಕಾರಿ ಸಂಬಂಧ ಕಾರ್ಯಗಳಲ್ಲಿ ಮುನ್ನಡೆ. ಯಂತ್ರೋಪಕರಣಗಳು ಸುಸ್ಥಿತಿಯಲ್ಲಿರುವುವು. ಕುಟುಂಬದಲ್ಲಿ ಒಮ್ಮತ ಮೂಡುವುದು. ಹಿರಿಯರ ಮಾರ್ಗದರ್ಶನದಿಂದ ಧೈರ್ಯ ಪ್ರಾಪ್ತಿಯಾಗುವುದು. ಹಿತಕರ ಸುದ್ದಿ. ಶುಭ ದಿನ: 30; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಒತ್ತಡ. ವಸ್ತುಗಳು ಕೈಯಿಂದ ಜಾರಿ ಬೀಳುವ ಸಾಧ್ಯತೆ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಚೇತರಿಕೆ. ಮನಸ್ಸು ಹಗುರವಾಗುವುದು. ಆಟ ಪಾಠಗಳಲ್ಲಿ ಪ್ರಗತಿ. ಆಪ್ತರಿಂದ ಸಹಾಯ. ಕೆಲಸ ಕಾರ್ಯಗಳಲ್ಲಿ ಸಫಲತೆ. ಸೂಕ್ತ ಲಾಭ. ಪತ್ರಾಗಮನ. ಶುಭ ದಿನ: 1; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಚಂಚಲತೆ. ಕೆಲಸ ಕಾರ್ಯಗಳಲ್ಲಿ ತೊಡಗಲು ನಿರಾಸಕ್ತಿ. ವ್ಯಾಪಾರದಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಧೈರ್ಯ ಪ್ರಾಪ್ತಿ. ಆಪ್ತರ ಆಗಮನ. ಉದ್ಯೋಗದಲ್ಲಿ ಮುನ್ನಡೆ. ಹಿರಿಯರಿಂದ ಸಲಹೆ. ಕ್ರಯ ವಿಕ್ರಯಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಕ್ರೀಡೆಗಳಲ್ಲಿ ಆಸಕ್ತಿ. ಶುಭ ದಿನ: 1; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಮನಃಶಾಂತಿ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ವ್ಯಾಪಾರದಲ್ಲಿ ಲಾಭ. ಆಪ್ತರ ಆಗಮನ. ಹಿತ ವಾರ್ತೆ. ವಾರದ ಮಧ್ಯಭಾಗದಲ್ಲಿ ಆತಂಕ. ಆರೋಗ್ಯ ವ್ಯತ್ಯಯ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ವಿರೋಧಿಗಳಿಂದ ಉಪದ್ರವ. ಅನಾವಶ್ಯಕ ಖರ್ಚು. ವಾಹನಗಳಿಂದ ತೊಂದರೆ. ವಾರಾಂತ್ಯ ಧೈರ್ಯ, ಮುನ್ನಡೆ. ಶುಭ ದಿನ: 29; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಮಧ್ಯಭಾಗದವರೆಗೂ ಅನುಕೂಲ. ಅಭಿವೃದ್ಧಿ, ಆಪ್ತರಿಂದ ಮಾರ್ಗದರ್ಶನ. ಉದ್ಯೋಗದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಕುಟುಂಬ ಸದಸ್ಯರಲ್ಲಿ ಒಮ್ಮತ. ವಾರಾಂತ್ಯ ಬೇಸರ. ವಿಪರೀತ ಶ್ರಮ. ವೃತ್ತಿ ವ್ಯವಹಾರಗಳಲ್ಲಿ ಅಶಾಂತಿ. ಶುಭ ದಿನ: 30; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ಉದ್ಯೋಗ ವೃತ್ತಿಗಳಲ್ಲಿ ಸಫಲತೆ. ಗುರು ಹಿರಿಯರ ಜೊತೆ ಸಮಾಲೋಚನೆ. ಕ್ರಯ ವಿಕ್ರಯಗಳಲ್ಲಿ ಲಾಭ. ವಿರೋಧಿಗಳಿಗೆ ಹಿನ್ನಡೆ. ಆರೋಗ್ಯ ಸುಧಾರಣೆ. ಪ್ರಯಾಣದಲ್ಲಿ ನಿರಾತಂಕ. ಸಂಘ ಸಂಸ್ಥೆಗಳ ಮುಖ್ಯಸ್ಥರಿಂದ ಸಲಹೆ ಸಹಕಾರ. ಸಂತಸ ಉಂಟಾಗುವ ಸಂದೇಶ. ಕುಟುಂಬ ಸದಸ್ಯರಲ್ಲಿ ಒಮ್ಮತ. ಶುಭ ದಿನ: 1; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಚಂಚಲ ಮನಸ್ಸು. ಅಕಾಲ ಭೋಜನ. ಹಿರಿಯರ ಮೇಲೆ ಕೋಪ ತಾಪ. ವೃತ್ತಿ ಪ್ರವೃತ್ತಿಗಳಲ್ಲಿ ಸಮಸ್ಯೆ. ವಾರದ ಮಧ್ಯಭಾಗದಿಂದ ಅನುಕೂಲ. ಆತ್ಮಬಲ ಹೆಚ್ಚುವುದು. ಕೆಲಸ ಕಾರ್ಯಗಳಲ್ಲಿ ಯಶಸ್ಸು. ವ್ಯಾಪಾರ ರಂಗದಲ್ಲಿ ಲಾಭ. ಪ್ರಯಾಣ ಸೌಖ್ಯ. ಹಿತಕರ ಘಟನೆಗಳು, ಪತ್ರಾಗಮನ. ಶುಭ ದಿನ: 1; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮಕರ**

ವಾರದ ಆರಂಭದಲ್ಲಿ ಸಮಾಧಾನ. ನಿರೀಕ್ಷೆಯಂತೆ ನಡೆಯುವ ಕಾರ್ಯ ಕಲಾಪಗಳು. ಲೇವಾದೇವಿಗಳಲ್ಲಿ ಪ್ರಗತಿ. ದೈವೀಕತೆಯಲ್ಲಿ ಆಸಕ್ತಿ. ವಾರದ ಮಧ್ಯಭಾಗದಲ್ಲಿ ಒತ್ತಡ. ಅಕಾಲ ಭೋಜನ. ವಿಪರೀತ ಶ್ರಮ. ಹಿರಿಯರ ಮೇಲೆ ಕೋಪತಾಪ. ಉದ್ಯೋಗ ವೃತ್ತಿಗಳಲ್ಲಿ ಅಶಾಂತಿ. ವಾರಾಂತ್ಯ ಸುಧಾರಣೆ. ಶುಭ ದಿನ: 29; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಮಧ್ಯಭಾಗದವರೆಗೂ ಅನುಕೂಲ. ಅಭಿವೃದ್ಧಿ, ಅಪೇಕ್ಷೆಯಂತೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ಪ್ರೀತಿಪಾತ್ರರ ಆಗಮನ. ಕುಟುಂಬ ಸದಸ್ಯರಲ್ಲಿ ಒಮ್ಮತ. ಬರಬೇಕಾದ ಹಣ ಬರುವುದು. ವಾರಾಂತ್ಯ ಒತ್ತಡ. ಅಧ್ಯಯನದಲ್ಲಿ ನಿರಾಸಕ್ತಿ. ವೃತ್ತಿ ಪ್ರವೃತ್ತಿಗಳಲ್ಲಿ ಸಮಸ್ಯೆ, ಅನಾರೋಗ್ಯ. ಶುಭ ದಿನ: 30; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮೀನ**

ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆದು ಸಂತಸವಾಗುವುದು. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಕುಟುಂಬ ಸದಸ್ಯರಲ್ಲಿ ಒಮ್ಮತ. ಹಿರಿಯರಿಂದ ಮಾರ್ಗದರ್ಶನ. ಆತ್ಮೀಯರಿಂದ ಸಂದೇಶ. ವಾಹನ ಯಂತ್ರೋಪಕರಣಗಳು ಅಡೆತಡೆಯಿಲ್ಲದೆ ನಡೆಯುವುದು. ದೈವೀಕತೆಯಲ್ಲಿ ಆಸಕ್ತಿ. ಶುಭ ದಿನ: 1; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ